**ಸಾಕ್ಷಿಗೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ವಾದಿ ಪರವಾಗಿ ಶ್ರೀ ಎ.ಎನ್.ಜಿ ವಕೀಲರಿಂದ:**

ನಾನು ನನ್ನ ಮುಖ್ಯ ವಿಚಾರಣೆಯ ಬದಲಿಗೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿರುವ ಸಂಗತಿಗಳು ಸತ್ಯವಾಗಿದ್ದು, ಅದನ್ನು ನಾನೇ ನಮ್ಮ ವಕೀಲರಿಗೆ ಹೇಳಿ ಬರೆಸಿರುತ್ತೇನೆ.

ಈ ದಾವೆಗೆ ಪೂರಕವಾಗಿ ನಾನು ಕೆಲವು ದಾಖಲೆಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನನ್ನ ಪರವಾಗಿ ನಿಶಾನೆಯಾಗಿ ಗುರುತಿಸುವಂತೆ ಕೋರುತ್ತೇನೆ. ಸಾಕ್ಷಿ ಹಾಜರುಪಡಿಸಿದ ದಾಖಲೆಗಳನ್ನು ಕೆಳಗಿನಂತೆ ನಿಶಾನೆಗಳಾಗಿ ಗುರುತಿಸಲಾಯಿತು.

| | |
|---|---|
| ನಿ.ಪಿ.–1 | ಎಸ್.ಎಸ್.ಎಲ್.ಸಿ ಅಂಕಪಟ್ಟಿ |
| ನಿ.ಪಿ.–2 ಮತ್ತು 3 | ಆಧಾರ್ ಕಾರ್ಡ್ ಗಳು |
| ನಿ.ಪಿ.–4 | ಪಡಿತರ ಚೀಟಿ |
| ನಿ.ಪಿ.–5 | ಅಂಕಪಟ್ಟಿ |
| ನಿ.ಪಿ.–6 | ಲೀಗಲ್ ನೋಟಿಸ್ |
| ನಿ.ಪಿ.–7 | ಪ್ರತ್ಯುತ್ತರ ನೋಟಿಸ್ |
| ನಿ.ಪಿ.–8 ರಿಂದ 15 | ಅಂಚೆ ರಶೀದಿಗಳು |
| ನಿ.ಪಿ.–16 ರಿಂದ 22 | ಅಂಚೆ ಸ್ವೀಕೃತಿಗಳು |

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಹಾಗೂ ನಾನು ಹಾಜರುಪಡಿಸಿದ ದಾಖಲೆಗಳನ್ನು ಪರಿಗಣಿಸಿ ಸದರಿ ದಾವೆಯನ್ನು ಖರ್ಚು ಸಹಿತ ಡಿಕ್ರಿ ಮಾಡಬೇಕಾಗಿ ಕೋರಿಕೊಳ್ಳುತ್ತೇನೆ.

**ಪಾಟೀ ಸವಾಲು: 1 ರಿಂದ 3 ಮತ್ತು 6 ನೇ ಪ್ರತಿವಾದಿಯರು ಪ್ರತಿವಾದ ಪತ್ರ ಸಲ್ಲಿಸದೆ ಇರುವುದರಿಂದ ಹಾಗೂ ಗೈರು ಹಾಜರಿರುವುದರಿಂದ ಮತ್ತು 5 ನೇ ಪ್ರತಿವಾದಿ ಏಕಪಕ್ಷೀಯರಾಗಿರುವುದರಿಂದ ಪಾಟೀ ಇಲ್ಲ ಎಂದು ಪರಿಗಣಿಸಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**C/c 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,**
**ಭದ್ರಾವತಿ.**